

# ಸೋನಲ್

# ವಿವಾಹ ವ್ಯಾಖ್ಯಾನ

'ಮದುವೆ ನಂತರ ಎಲ್ಲ ಬದಲಾಗಿಬಿಡುತ್ತದೆ, ಅದರಲ್ಲೂ ನಟಿಯರ ಕರಿಯರ್‌ಗೆ ತೊಡಕಾಗುವುದು ಖಚಿತ ಎಂಬ ಮಾತನ್ನು ಹಲವು ಬಾರಿ ಕೇಳಿದ್ದೇನೆ. ಆದರೆ ನನ್ನ ವಿಷಯದಲ್ಲಿ ಹೀಗಾಗಿಲ್ಲ. ತರುಣ್ ನನಗೆ ದೊಡ್ಡ ಬೆಂಬಲವಾಗಿ ನಿಂತಿದ್ದಾರೆ. ಒಬ್ಬ ಸಿನಿಮಾ ನಿರ್ದೇಶಕರಾಗಿ, ನನ್ನ ಪತಿಯಾಗಿ, ನನ್ನ ಬೆಳವಣಿಗೆಗೆ ಪ್ರೇರಣೆಯಾಗಿದ್ದಾರೆ' ಎಂದು ಹಾಡಿ ಹೊಗಳಿದ್ದಾರೆ ನಟಿ ಸೋನಲ್.

ಕೆಲವು ತಿಂಗಳ ಹಿಂದೆ ನಿರ್ದೇಶಕ ತರುಣ್ ಕಿಶೋರ್ ಸುಧೀರ್ ಜೊತೆ ಸೋನಲ್ ಮದುವೆಯಾಗಿತ್ತು. ಕೊಂಚ ಬ್ರೇಕ್ ತೆಗೆದುಕೊಂಡಿದ್ದ ಅವರು ಮತ್ತೆ ಸಿನಿಮಾಗಳತ್ತ ಮುಖ ಮಾಡಿದ್ದಾರೆ.

ಈಚೆಗೆ ಸೋನಲ್ ಅಭಿನಯದ 'ಮಾದೇವ' ಸಿನಿಮಾ ಬಿಡುಗಡೆಯಾಗಿದೆ. ಇದರೊಂದಿಗೆ ಅವರ ಕೈಯಲ್ಲಿ ಮತ್ತಷ್ಟು ಸಿನಿಮಾಗಳೂ ಸರದಿಯಲ್ಲಿವೆ. 'ಮದುವೆಯಾದ ಮೇಲೆ ಸಿನಿಮಾ ಕುರಿತ ದೃಷ್ಟಿಕೋನ ಮತ್ತಷ್ಟು ತೀಕ್ಷ್ಣವಾಗಿದೆ. ನನ್ನ ಲೋಕ ಮತ್ತಷ್ಟು ಕಲಾತ್ಮಕತೆಯಿಂದ ತುಂಬಿದೆ' ಎಂದಿರುವ ಅವರು, ಸಿನಿಮಾರಂಗದಲ್ಲಿ ಮದುವೆಯಾದ ನಟಿಯರ ಕುರಿತ ದೃಷ್ಟಿಕೋನ ಬದಲಾಗಬೇಕಾದ ಕುರಿತು ಮಾತನಾಡಿದ್ದಾರೆ.

'ಮದುವೆ ನಂತರ ನಟಿಯರು ನಟಿಸುವುದಿಲ್ಲ ಎಂದು ನಿರ್ದೇಶಕರೇ ಊಹಿಸಿಕೊಳ್ಳುತ್ತಾರೆ. ಈ ಆಲೋಚನೆ ಬದಲಾಗಬೇಕು. ಮದುವೆ ಜೀವನದ ಒಂದು ಭಾಗವಷ್ಟೆ. ಇದು ಕರಿಯರ್‌ನ ಕೊನೆಯಲ್ಲ. ನಾನು ಮದುವೆ ನಂತರ ಪುಟ್ಟ ಬ್ರೇಕ್ ತೆಗೆದುಕೊಂಡಿದ್ದೆ. ಅದೇ ಕೊನೆ ಎಂದು ಭಾವಿಸಬೇಕಿಲ್ಲ' ಎಂದು ಚುಟುಕಾಗಿ ಹೇಳಿದ್ದಾರೆ.

ರಾಂಕಾಂ ಸಿನಿಮಾಗಳಲ್ಲಿ ನಟಿಸುವ ಅಭಿಲಾಷೆ ವ್ಯಕ್ತಪಡಿಸಿರುವ ಸೋನಲ್, ಕೋಮಲ್ ಜೊತೆ 'ರೋಲೆಕ್ಸ್', ಕೃಷ್ಣ ಅಜಯ್ ರಾವ್ ಜೊತೆ 'ರಾಧೇಯ', ಉಪೇಂದ್ರ ಜೊತೆ 'ಬುದ್ಧಿವಂತ 2' ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ■



# ನವೀನ್ ಶಂಕರ್ 'ಕಮರ್ಷಿಯಲ್' ಕಥೆ



ಗುಳ್ಟು, ಹೊಂದಿಸಿ ಬರೆಯಿರಿ, ಧರಣಿ ಮಂಡಲ ಮಧ್ಯದೊಳಗೆ, ಹೊಯ್ಸಳ, ನೋಡಿದವರು ಏನಂತಾರೆ... ಹಲವು ಸಿನಿಮಾಗಳಲ್ಲಿ ತಮ್ಮದೇ ಮ್ಯಾನರಿಸಂನಿಂದ ಗುರುತಿಸಿಕೊಂಡಿರುವ ನಟ ನವೀನ್ ಶಂಕರ್, ಇದೀಗ ಶಿವರಾಜ್‌ಕುಮಾರ್ ಅಭಿನಯದ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

ಸದ್ಯ ಸ್ಕ್ರಿಪ್ಟ್‌ಗಳ ಕುರಿತಂತೆ ತಮ್ಮ ದೃಷ್ಟಿಕೋನವನ್ನು ಬದಲಿಸಿದ್ದು, ಕಮರ್ಷಿಯಲ್ ಅಂಶದಿಂದಲೂ ಆಲೋಚಿಸುತ್ತಿರುವುದಾಗಿ ಹೇಳಿದ್ದಾರೆ. 'ಈ ಮುನ್ನ ನಾನು ಕಂಟೆಂಟ್ ಮೇಲಷ್ಟೇ ಗಮನಹರಿಸಿದ್ದೆ. ಕಥೆಯ ಆಳ, ರಚನೆ ಬಗ್ಗೆ ಮಾತ್ರ ತಿಳಿದುಕೊಳ್ಳುತ್ತಿದ್ದೆ. ಕಮರ್ಷಿಯಲ್ ಆಯಾಮದಿಂದ ನೋಡುತ್ತಿರಲಿಲ್ಲ. ಈಗ ಒಂದು ಕಥೆಗೆ ಕಮರ್ಷಿಯಲ್ ಆಯಾಮವನ್ನೂ ನೀಡುವುದು ಬಹಳ ಅವಶ್ಯವಿದೆ. ಸಿನಿಮಾ ಹಾಗೂ ನಟರು ಮೊದಲು ಜನರನ್ನು ತಲುಪಬೇಕು. ನಂತರ ಚೌಕಟ್ಟುಗಳನ್ನು ಮೀರುವ ಕುರಿತು ಯೋಚಿಸಬಹುದು' ಎಂದು ಹೇಳಿದ್ದಾರೆ.

ಶಿವಣ್ಣ ಜೊತೆ ನಟಿಸುತ್ತಿರುವ ಈ ಸಿನಿಮಾ, ತಮ್ಮ ಕರಿಯರ್‌ನಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟಂತೆ ಎಂದು ಭಾವಿಸಿರುವ ಅವರು, 'ಈ ಸಿನಿಮಾದಲ್ಲಿ ನನ್ನದು ಒಂದು ಪ್ರಮುಖ ಪಾತ್ರ. ಈ ಪಾತ್ರದ ಪೋಷಣೆ ಬಹಳ ಬಲವಾಗಿದೆ. ಈ ಅಂಶವೇ ಸಿನಿಮಾ ಒಪ್ಪಲು ಕಾರಣ. ಶಿವರಾಜ್‌ಕುಮಾರ್ ಅವರು ಇರುವ ರೀತಿ ಹಾಗೂ ಸಹ ನಟರನ್ನು ನಡೆಸಿಕೊಳ್ಳುವ ರೀತಿ ಬಹಳ ಗೌರವ ಮೂಡಿಸುತ್ತದೆ' ಎಂದು ಅಭಿಮಾನ ತುಂಬಿ ಮಾತನಾಡಿದ್ದಾರೆ.

'ಜನರು ಈಗ ಕಥೆಯೊಂದನ್ನೇ ಕೇಳುತ್ತಿಲ್ಲ. ಬಜೆಟ್ ಅನ್ನೂ ನೋಡುತ್ತಾರೆ. ಇವೆರಡು ಅಂಶಗಳು ನನಗೆ ಮನದಟ್ಟಾಗಿವೆ. ಕಂಟೆಂಟ್ ಜೊತೆಗೆ ಕಮರ್ಷಿಯಲ್ ಕೂಡ ಇರಬೇಕು. ಇದೇ ವಾಸ್ತವ. ದೀರ್ಘಾವಧಿ ಸಿನಿಮಾರಂಗದಲ್ಲಿ ಉಳಿಯಬೇಕಾದರೆ, ಮಾರ್ಕೆಟ್ ಅನ್ನೂ ಗಣನೆಗೆ ತೆಗೆದುಕೊಳ್ಳಬೇಕು' ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಾನು ಅಭಿನಯಿಸಿರುವ ಗುಳ್ಟು, ಹೊಂದಿಸಿ ಬರೆಯಿರಿ, ಧರಣಿ ಮಂಡಲ ಮಧ್ಯದೊಳಗೆ, ಹೊಯ್ಸಳ ಹಾಗೂ ನೋಡಿದವರು ಏನಂತಾರೆ ಇವೆಲ್ಲವೂ ಅತ್ಯುತ್ತಮ ಸಿನಿಮಾಗಳು. ಅದರಲ್ಲಿ ಒಂದೆರಡು ಕಮರ್ಷಿಯಲ್ ಸಿನಿಮಾಗಳಾಗಿದ್ದವು. ಆಳವಾದ ಕಥೆಯ ನಿರೂಪಣೆ ಜೊತೆ ಸಿನಿಮಾಗೆ ಕಮರ್ಷಿಯಲ್ ಅಪೀಲ್ ಕೂಡ ಅಷ್ಟೇ ಮುಖ್ಯ ಎಂದಿದ್ದಾರೆ. ■